ಯಾವಾಗ ತೆಗೆದುಕೊಂಡಿದ್ದೀರಿ, ಮತ್ತು ನಮ್ಮ ಕಾರ್ನ್‌ಸ್ಟ್ಯೂಯೆನ್ಸಿಯಲ್ಲಿ ಎರಡು ತಾಂಡಗಳು ಇವೆ. ಅದರ ಹೆಸರು ಕದನ ಮತ್ತು ಕುಸನೂರು ಎಂದು ಹೆಸರು, ೧೧ ಕೆವಿಎ ಲೈನು ತೆಗೆದುಕೊಂಡು ಮುಗಿಸಿಕೊಡುತ್ತೀರಾ. ಇದರ ಬಗ್ಗೆ ವಿಶೇಷ ಕಾಯಿದೆ ತೆಗೆದುಕೊಂಡು ೩-೪ ತಿಂಗಳಲ್ಲಿ ಮುಗಿಸಿ ಕೊಡುತ್ತೀರಾ?

ಶ್ರೀ ಲಕ್ಷ್ಮೀನರಸಿಂಹಯ್ಯ.—Census ವಿಲೇಜ್‌ಗಳಿಗೆ ಏನು ವಿದ್ಯುಚ್ಛಕ್ತಿ ಕಾರ್ಯಕ್ರಮಗಳು ಇವೆ, ಅವು ಈ ವರ್ಷದ ಕಾರ್ಯಕ್ರಮದಲ್ಲಿ ಸೇರಿಕೊಂಡಿವೆ. ಈ ವರ್ಷದ ಕೊನೆಯವರೆಗೆ ಅದಕ್ಕೆ ಅವಧಿ ಇದೆ. ಆದರೂ ಈ ವರ್ಷದ ಕೊನೆಯವರೆಗೆ ಕೇವಲ ನಾಲ್ಕು ಗ್ರಾಮಗಳ ವಿದ್ಯುದ್ದೀಕರಣ ಉಳಿದಿರುವುದರಿಂದ ಅದನ್ನು ಬೇಗ ಮಾಡಿಸುತ್ತೇನೆ. ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಎರಡು ತಾಂಡಗಳ ಬಗ್ಗೆ ಹೇಳಿದರು. ಆದರ ಸಂಪೂರ್ಣ ವಿವರವನ್ನು ತರಿಸಿಕೊಂಡು ಅದಕ್ಕೆ ಹೆಚ್ಚು ಖರ್ಚು ಆಗದಿದ್ದರೆ ಒಂದು ತಿಂಗಳನಲ್ಲಿ ಅದನ್ನು ಮಾಡಿಕೊಡುತ್ತೇನೆ. ಮಾನ್ಯ ಸದಸ್ಯರಿಗೆ ಈ ಕೆಲಸದಿಂದ ೯೦೦ ಪರ್ಸೆಂಟ್ ಎಲೆಕ್ಟ್ರಿಫಿಕೇಶನ್ ಆಯಿತೆಂದು ಸಮಾಧಾನ ಆಗುವುದಾದರೆ ಮತ್ತು ಇದರಿಂದ ಹೆಚ್ಚು ಖರ್ಚು ಬರದಿದ್ದರೆ ಒಂದು ತಿಂಗಳಿನಲ್ಲಿ ಮಾಡಿಸಿಕೊಡುತ್ತೇನೆ. ಅದಕ್ಕೆ ಹಣ ಹೆಚ್ಚು ಖರ್ಚು ಬಂದರೆ ಸ್ವಲ್ಪ ನಿಧಾನವಾಗುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—ಇದಕ್ಕೆ ಕೇವಲ ೬೦ ರಿಂದ ೭೦ ಸಾವಿರ ರೂಪಾಯಿ ಒಳಗೆ ಆಗುತ್ತದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ವಿವರವನ್ನು ತರಿಸಿಕೊಂಡು ಇದನ್ನು ಮಾಡಿಸಿಕೊಡುತ್ತೇನೆ.

ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜಿನ ಪ್ರಮಾಣ

೧೫೮೫ ಶ್ರೀ ಡಿ. ಟಿ. ಜಯಕಂಮಾರ್ (ನಂಜನಗೂಡು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩ರವರೆಗೆ ನಂಜನಗೂಡು ತಾಲ್ಲೂಕಿನಲ್ಲಿ ಎಷ್ಟು ಪಂಪುಸೆಟ್ಟುಗಳಿದ್ದವು ?

ಆ) ೧೯೮೩ರ ನಂತರ ಎಷ್ಟು ಪಂಪುಸೆಟ್ಟುಗಳನ್ನು ಹಾಕಲಾಗಿದೆ, ಅವುಗಳಲ್ಲಿ ಎಷ್ಟು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ?

ಇ) ಪಂಪುಸೆಟ್ಟುಗಳಿಗೆ ಹಾಲಿ ಬೇಡಿಕೆ ಇರುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು ? ಹಾಗೂ ಈ ವಿದ್ಯುತ್ ಬೇಡಿಕೆಯನ್ನು ಯಾವಾಗ ಪೂರೈಸಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ೩೧-೩-೧೯೮೩ರವರೆಗೆ ನಂಜನಗೂಡು ತಾಲ್ಲೂಕಿನಲ್ಲಿ ೧೫೯೭ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿತ್ತು.

ಆ) ೧-೪-೧೯೮೩ ರಿಂದ ೩೧-೩-೧೯೮೮ರವರೆಗೆ ೭೭೧ ಪಂಪುಸೆಟ್ಟುಗಳನ್ನು ಕೂಡಿಸಿರುವ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೆಲಸದ ಪೂರ್ಣತೆಯ ವರದಿ ಬಂದಿದ್ದು ಈ ಅವಧಿಯಲ್ಲಿ ೬೮೪ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ.

ಇ) ದಿನಾಂಕ. ೩೦-೪-೧೯೮೮ರ ವೇಳೆಗೆ ೨೮೯ ಅರ್ಜಿಗಳು ಹಾಕಿ ಉಳಿದಿದ್ದವು. ಇವಗಳ ಪೈಕಿ ೧೨೪ ಅರ್ಜಿದಾರರು ಮಾತ್ರ ಪಂಡಳಿ ನಿಯಮ ಪರಿಪಾಲಿಸಿದ್ದಾರೆ. ಏಳು ಜನರ ಕೆಲಸ ಪೂರೈಸಿದೆ ಉಳಿದವರುಗಳಿಗೆ ಆದ್ಯತೆಯ ಸೂತ್ರದಂತೆ ವಿದ್ಯುತ್ ಒದಗಿಸಲಾಗುತ್ತದೆ, ಇದಕ್ಕೆ ಈಗಿನ ವಾರ್ಷಿಕ ಗರಿಯಂತೆ ೯-೧೦ ತಿಂಗಳುಗಳು ಬೇಕಾಗುತ್ತವೆ.

ಶ್ರೀ ಡಿ. ಟಿ. ಜಯಕಂಮಾರ್.—ನವಂಗೆ ಸ್ವಾತಂತ್ರ್ಯ ಬಂದು ೩೫ ವರ್ಷಗಳು ಆಗುವವರೆಗೆ ೧೩೦೭ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಿದ್ದರೆ ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂದರೆ ೧೯೮೩ ರಿಂದ ೧೯೮೮ರವರೆಗೆ ೭೭೧ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು

ಮಾಡಲಾಗಿದೆ. ಈ ೫ ವರ್ಷಗಳಲ್ಲಿ ಶೇಕಡಾ ೫೦ ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಗುರಿಯನ್ನು ಸಾಧನೆ ಮಾಡಿರುವುದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ ಇದರಲ್ಲಿ ಏನು ಅನ್ಯಾಯ ವಾಗುತ್ತಿದೆ ಎಂದರೆ. ಇವರು ಒಂದು ಸೀನಿಯಾರಿಟಿ ಲಿಸ್ಟ್‌ನ್ನು ವಿದ್ಯುತ್ ಕೊಡುವ ಬಗ್ಗೆ ಮಾಡಿ ಕೊಂಡಿದ್ದಾರೆ, ಎಸ್. ಸಿ ಮತ್ತು ಎಸ್ ಟಿ. ಜನರಿಗೆ, ಹಿಂದುಳಿದ ವರ್ಗದವರಿಗೆ ಮತ್ತು ಇತರರಿಗೆ ಎಂದು ಒಂದು ಲಿಸ್ಟ್ ಮಾಡಿಕೊಂಡಿದ್ದಾರೆ. ಆದರೆ ಅದರ ಪ್ರಕಾರ ವಿದ್ಯುತನ್ನು ಒದಗಿಸುತ್ತಿಲ್ಲ, ಈಗ ನಡೆಯುತ್ತಿರುವ ತಾರತಮ್ಯವನ್ನು ತಾವು ಹೋಗಲಾಡಿಸಬೇಕು, ಇದರ ಜೊತೆಗೆ ವಿದ್ಯುತ್ ಸರಬರಾಜು ಮಾಡಲು ಕಂಡಕ್ಟರ್ಸ್ ಮೊದಲಾದ ಮೆಟೀರಿಯಲ್ಸ್ ಇಲ್ಲವೆಂದು ಹೇಳುತ್ತಾರೆ. ಅಲ್ಲಿನ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು ಈ ಮಾತನ್ನು ನನಗೆ ಪದೇ ಪದೇ ಹೇಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಕಡೆಗೂ ಸಹ ಗಮನ ಹರಿಸಿ ಇನ್ನುಳಿದಿರುವ ೨೯೯ ಪಂಪುಸೆಟ್ಟುಗಳಿಗೂ ವಿದ್ಯುತ್ ಒದಗಿಸಲು ಕ್ರಮ ಕೈಗೊಳ್ಳಬೇಕು. ಮತ್ತೆ ಪಂಪುಸೆಟ್ಟುಗಳಿಗೆ ರಾತ್ರಿ ಹೊತ್ತು ವಿದ್ಯುತ್ ಒದಗಿಸುವುದು ಬೇಡ. ಇದರಿಂದ ರೈತರಿಗೆ ಕಷ್ಟವಾಗುತ್ತದೆ, ನೀರು ಕತ್ತಲಲ್ಲಿ ಹರಿದು ಹೋಗುವುದು ಸರಿಯಾಗಿ ಕಾಣುವೆ ಹೆಚ್ಚು ನೀರು ಪೋಲಾಗುವುದರಿಂದ ಹಗಲು ಹೊತ್ತಿನಲ್ಲಿ ಮಾತ್ರ ವಿದ್ಯುತ್ ಸರಬರಾಜು ಮಾಡಬೇಕೆಂದು ಇಲ್ಲಿ ಸಾಕಷ್ಟು ಚರ್ಚೆ ಆಗಿದೆ ನೀರು ಪೋಲಾಗುವುದು ನ್ಯಾಷನಲ್ ವೇಸ್ಟ್ ಆದಂತೆ, ಆದ್ದರಿಂದ ಹಗಲು ಹೊತ್ತಿನಲ್ಲಿಯೇ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ತಿಳಿಸಿರುವಂತಹ ನಾವು ಗುರಿಯನ್ನು ಮೀರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸಿದ್ದೇವೆ. ಇದಕ್ಕೆ ಸಂಬಂಧ ಪಟ್ಟಂತೆ ಬರುವ ಎಲ್ಲ ಅರ್ಜಿಗಳನ್ನು ಒಂದೇ ಸಲ ಪರಿಶೀಲನೆ ಮಾಡಿ ಎಲ್ಲ ಪಂಪ್‌ಸೆಟ್ಟುಗಳಿಗೂ ವಿದ್ಯುತ್ ಒದಗಿಸ ಬೇಕೆಂದು ಮಾನ್ಯ ಸದಸ್ಯರು ಕೇಳುತ್ತಾರೆ. ಇಂತಹ ಒಂದು ಆಸಕ್ತಿ ಸಾರ್ವಜನಿಕವಾಗಿ ಎಲ್ಲ ಶಾಸಕರಿಗೂ ಇರುತ್ತದೆ. ಆದಕ್ಕಾಗಿಯೇ ನಾವು ಒಂದು ಆದ್ಯತಾ ಪಟ್ಟಿಯನ್ನು ಮಾಡಿಕೊಂಡಿದ್ದೇವೆ. ೫ ಕಂಬಗಳ ನಡುವೆ ಬರುವಂತಹ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ ಒಂದು ಪಟ್ಟಿಯನ್ನು ಮತ್ತು ೫ ಕಂಬಗಳಿಗಿಂತಲೂ ಹೆಚ್ಚು ಕಂಬಗಳ ನಡುವೆ ಬರುವಂತಹ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ ಮತ್ತೊಂದು ಆದ್ಯತಾ ಪಟ್ಟಿಯನ್ನು ನಾವು ತಯಾರಿಸಿದ್ದೇವೆ, ಇದರ ಪ್ರಕಾರವೇ ಒಂದು ಕೆಲಸ ಮುಗಿದ ನಂತರ ಮತ್ತೊಂದು ಕೆಲಸ ತೆಗೆದುಕೊಂಡು ಮುಗಿಸಬೇಕೆಂಬ ನಿಯಮವಿದೆ ಇದರ ಜೊತೆಗೆ ಪಿ ಎಲ್. ಡಿ. ಬಿ. ಬ್ಯಾಂಕ್‌ನಿಂದ ಮತ್ತು ಇತರೇ ಮೂಲಗಳಿಂದ ಸಾಲ ತೆಗೆದುಕೊಂಡಿರುವವರಿಗೆ ಮೊದಲು ಸರ್ವೀಸ್ ಕೊಡಬೇಕೆಂಬ ಸೂಚನೆ ಸಹ ಇದೆ. ಒಂದು ವೇಳೆ ಯಾರಾದರೂ ಈ ನಿಯಮವನ್ನು ಅನುಸರಿಸದೇ ಇರುವುದು ಕಂಡು ಬಂದರೆ ನಾವು ಅವರ ಮೇಲೆ ಕ್ರಮ ಕೈಗೊಳ್ಳುವ ಕೆಲಸವನ್ನು ಮಾಡಬಹುದು. ಮತ್ತೆ ರಾತ್ರಿ ಹೊತ್ತು ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿರುವ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ ಆಗಿದೆ. ಇನ್ನು ವಾರ ಅಥವಾ ೧೫ ದಿವಸಗಳಲ್ಲಿ ವಿದ್ಯುತ್ ಉತ್ಪಾದನಾ ಪರಿಸ್ಥಿತಿ ಸ್ವಲ್ಪ ಸುಧಾರಿಸಬಹುದು. ವಿದ್ಯುತ್ ಉತ್ಪಾದನೆ ಜಾಸ್ತಿ ಆದ ತಕ್ಷಣ ಈ ಸಮಸ್ಯೆ ಇರುವುದಿಲ್ಲ. ಈಗ ವಿದ್ಯುತ್ ಉತ್ಪಾದನೆ ಕಡಿಮೆ ಇರುವ ಕಾರಣದಿಂದ ಪೀಕ್ ಅವರ್ಸ್‌ನಲ್ಲಿ ನಾವು ಪವರ್ ಕಟ್ ಮಾಡಬೇಕಾಗಿರುತ್ತದೆ, ಲೋಡ್-ಷೆಡಿಂಗ್ ಮಾಡಬೇಕಾಗಿರುತ್ತದೆ. ಈ ಒಂದು ಪರಿಸ್ಥಿತಿ ಇನ್ನು ಕೆಲವೇ ದಿನಗಳಲ್ಲಿ ಸುಧಾರಣೆ ಆಗುವ ಸಂಭವ ಇರುವುದರಿಂದ ಇದರ ಬಗ್ಗೆ ಹೆಚ್ಚು ಒತ್ತಾಯ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ. ಈಗ ಮಾತ್ರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿರುವ ಸಮಯವನ್ನು ಬದಲಾವಣೆ ಮಾಡುವುದು ಕಷ್ಟವಾಗುತ್ತದೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ವಿದ್ಯುತ್ ಉತ್ಪಾದನೆ ಕಡಿಮೆ ಇರುವುದರಿಂದ ಈ ಒಂದು ಬೇಡಿಕೆಯನ್ನು ಈಡೇರಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಬೀದಿ ದೀಪಗಳನ್ನು ರಾತ್ರಿ ೭ ಗಂಟೆಯ ನಂತರ ಹಾಕುವುದಕ್ಕೆ ಬದಲು ೫ ಗಂಟೆಗೆ ಹಾಕುತ್ತಾರೆ. ಇದರಿಂದ ಸುಮಾರು ೨ ಗಂಟೆಗಳ ಕಾಲ ವಿದ್ಯುತ್‌ನ ನಷ್ಟವಾಗುವುದಿಲ್ಲವೇ ? ಮತ್ತೆ ಸರ್ಕಾರದ ಕಛೇರಿಗಳಲ್ಲಿ ಹಗಲು ಹೊತ್ತಿನಲ್ಲಿ ಸಹ ದೀಪಗಳನ್ನು ಹಾಕಿರುತ್ತಾರೆ. ಫ್ಯಾನ್ ಮತ್ತು ಲೈಟ್‌ನ್ನು ಯಾವಾಗಲೂ ಹಾಕಿರುತ್ತಾರೆ. ಇದನ್ನು ಹೇಳುವವರು ಮತ್ತು ಕೇಳುವವರು ಯಾರೂ ಇಲ್ಲದಂತೆ ಆಗಿದೆ. ಇದರ ಬಗ್ಗೆ ಒಂದು ವಿಜಿಲೆನ್ಸ್ ಸೆಲ್ ಎಂದು ಮಾಡಿ ಯಾರು ಯಾರು ವಿದ್ಯುತ್‌ನ್ನು ಸರಿಯಾಗಿ ಉಪಯೋಗ

ಮಾಡುತ್ತಿದ್ದಾರೆ, ಯಾರು ಮಾಡುತ್ತಿಲ್ಲ ಎಂಬುದನ್ನು ಚೆಕ್ ಮಾಡಿಸಬೇಕು. ಇವನ್ನು ಮೊದಲು ಕಂಟ್ರೋಲ್ ಮಾಡಿದರೆ ವಿದ್ಯುತ್ ಕೊರತೆಯು ತಾಪತ್ರಯವೇ ಇರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಎನರ್ಜಿ ಎನ್ಟೈಟಲ್ಮೆಂಟ್ ಎಂದು ಫಿಕ್ಸ್ ಮಾಡಿರುತ್ತೇವೆ. ಖಾಸಗಿಯವರು ಉಪಯೋಗಿಸಿಕೊಳ್ಳಲು ಅವಕಾಶ ಇರತಕ್ಕಂಥ ಅಷ್ಟು ಯೂನಿಟುಗಳನ್ನು ಅವರು ಯಾವ ರೀತಿ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಅವರ ಉಪಯೋಗದ ಮೇಲೆ ನಮಗೆ ಕಂಟ್ರೋಲ್ ಬರುವುದಿಲ್ಲ. ಸರ್ಕಾರಿ ಮತ್ತು ಬೇರೆ ನಗರಸಭೆಗಳಿಗೆ ಈ ಬಗ್ಗೆ ಕಟ್ಟುನಿಟ್ಟಾದ ಸೂಚನೆ ಕೊಟ್ಟಿದ್ದೇವೆ. ವಿದ್ಯುತ್ತನ್ನು ಮಿತವ್ಯಯ ಮಾಡಬೇಕು ಹಾಗೂ ಉಳಿಸಬೇಕೆಂದು ಹೇಳಿದ್ದೇವೆ. ಇಂತಹ ಸಂದರ್ಭದಲ್ಲಿ ಅವರೂ ಕೂಡ ನಮ್ಮೊಡನೆ ಸಹಕರಿಸಬೇಕು ಕೆಲವು ಕಡೆ ನಮ್ಮ ಕಣ್ಣಿಗೆ ಕಾಣುವಂತೆ ಹಾಗೂ ಶಾಸಕರ ಕಣ್ಣಿಗೆ ಕಾಣುವಂತೆ ಕೆಲವು ಲೋಪದೋಷಗಳು ಆಗಿರುತ್ತದೆ. ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಆಗಾಗ್ಗೆ ಕೊಡುತ್ತಿದ್ದೇವೆ. ಆದರೂ ಕೂಡ, ಅದರಿಂದ ಹೆಚ್ಚು ಪ್ರಯೋಜನ ಆಗಿಲ್ಲ. ಜನಗಳಲ್ಲಿ ಎಂದರೆ ಬಳಕೆದಾರರಲ್ಲಿ ಹಾಗೂ ಪ್ರತಿಯೊಬ್ಬ ಅಧಿಕಾರಿಗಳಲ್ಲಿ ಕೂಡ ಒಂದು ಕಾನ್ಷಿಯಸ್ನೆಸ್ ಬರಬೇಕು ಇಂತಹ ಪರಿಸ್ಥಿತಿಯಲ್ಲಿ ನಾವು ವಿದ್ಯುತ್ತನ್ನು ಉಳಿಸಬೇಕು ಎಂಬ ಮನೋಭಾವ ಅವರಲ್ಲಿ ಬೆಳೆಯು ಬೇಕಾದುದು ಬಹಳ ಮುಖ್ಯ.

ಗಾಳಿಬೀಡು ಗ್ರಾಮದ ಪ್ರದೇಶದಲ್ಲಿ ಚಹಾ ತೋಟವನ್ನು ಸ್ಥಾಪಿಸಿರುವುದು.

೧೧೭೯ ಶ್ರೀ ಡಿ. ಎ. ಚಿನ್ನಪ್ಪ, (ಮಡಿಕೇರಿ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಗಾಳಿಬೀಡು ಗ್ರಾಮದ ಪ್ರದೇಶದಲ್ಲಿ ಸರ್ಕಾರವು ಚಹಾ ತೋಟವನ್ನು ಸ್ಥಾಪಿಸಿರುವುದು ನಿಜವೇ ?

೨) ಈ ಯೋಜನೆಗೆ ಈ ತನಕ ಮಾಡಲಾದ ವೆಚ್ಚ.

೩) ಈ ಯೋಜನೆಯನ್ನು ಯೋಜನಾ ಆಯೋಗವು ಅನುಮೋದಿಸಿದೆಯೆ ?

೪) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದಿರುವ ಪೊತ್ತವೆಷ್ಟು ?

೫) ಈ ಯೋಜನೆಯನ್ನು ಸ್ಥಗಿತಗೊಳಿಸಲು ಹಾಗೂ ಸರ್ಕಾರೀ ಆದೇಶವನ್ನು ಹೊರಡಿಸದಿರಲು ಕಾರಣಗಳೇನು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ಮಂತ್ರಿಗಳು).—

೧) ಗಾಳಿಬೀಡು ಪ್ರದೇಶದಲ್ಲಿ ೧೯೮೪ನೇ ಇಸವಿಯಿಂದ ಸರ್ಕಾರವು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಮುಖಾಂತರ ಚಹಾ ತೋಟವನ್ನು ಪ್ರಾಯೋಗಿಕವಾಗಿ ಬೆಳೆಸಲಾಗುತ್ತಿದೆ.

೨) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮವು ರೂ. ೪೨.೫೦ ಲಕ್ಷಗಳನ್ನು ಪ್ರಾಯೋಗಿಕ ತೋಟಗಳನ್ನು ಸೃಜಿಸಲು ವೆಚ್ಚ ಮಾಡಿದೆ.

೩) ಇಲ್ಲ.

೪) ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿ ೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನಲ್ಲಿ ಚಹಾ ತೋಟಗಳ ಪ್ರಾಯೋಗಕ್ಕಾಗಿ ರೂ. ೩೨ ಲಕ್ಷಗಳನ್ನು ಮಂಜೂರು ಮಾಡಿದೆ. (ಕ್ರಮವಾಗಿ ರೂ. ೫.೦೦ ಲಕ್ಷ ಮತ್ತು ೨೭.೦೦ ಲಕ್ಷ).

೫) ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೆ ಈ ಯೋಜನೆಯನ್ನು ಕೈಗೆ ಎತ್ತಿಕೊಂಡು ಸುಮಾರು ೪ ವರ್ಷವಾಯಿತು. ಈ ಮಧ್ಯೆ ಏನಾಗಿದೆಯೆಂದರೆ ಕೆಲವಾರು ಜನ ಸೇರಿಕೊಂಡು ಈ ಯೋಜನೆಯನ್ನು